ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

# ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ 21 | November 2021 | ಸಂಚಿಕೆ 2



"ಮಕ್ಕಳು ಮತ್ತು ಯುವಜನರೊಂದಿಗಿನ ನಮ್ಮ ಸಂಬಂಧದಲ್ಲಿ, ನಾವು ತಕ್ಷಣ ಸರಿಪಡಿಸಬಹುದಾದ ಯಾಂತ್ರಿಕ ಸಾಧನಗಳೊಂದಿಗೆ ವ್ಯವಹರಿಸುತ್ತಿಲ್ಲ, ಬದಲಾಗಿ, ಸುಲಭವಾಗಿ ಪ್ರಭಾವಕ್ಕೊಳಗಾಗುವ, ಬೇಗ ಸ್ಥಿತಿಬದಲಾಯಿಸುವ, ಸಂವೇದನಾಶೀಲ, ಭಯಾವೃತ, ವಾತ್ಸಲ್ಯಮಯಿ ಜೀವಿಗಳೊಂದಿಗೆ, ಮತ್ತು ಅವರೊಂದಿಗೆ ವ್ಯವಹರಿಸಲು ನಾವು ಅಗಾಧ ತಿಳುವಳಿಕೆ, ಸಹನಾಶಕ್ತಿ ಹಾಗೂ ಪ್ರೀತಿ ಹೊಂದಿರಬೇಕು."

**- ಜೆ. ಕೃಷ್ಣಮೂರ್ತಿ**

# ಶಾಲೆ ನಿಮ್ಮನ್ನು ಜೀವನಕ್ಕಾಗಿ ಸಿದ್ಧಗೊಳಿಸುತ್ತದೆಯೇ? - ಜೆ. ಕೃಷ್ಣಮೂರ್ತಿ

ನಮ್ಮಲ್ಲಿ ಹೆಚ್ಚಿನವರು ಏನಾಗಲಿದ್ದೇವೆ ಅಥವಾ ಏನಾಗಿದ್ದೇವೆ ಎಂದು ವಿಸ್ಮಯಪಡುತ್ತೇವೆ. ನಾವು ಶಾಲೆ, ಕಾಲೇಜುಗಳಿಗೆ ಹೋಗುತ್ತೇವೆ, ಆನಂತರ 'ಜೀವನ' ಎಂದು ಕರೆಯಲ್ಪಡುವುದರಲ್ಲಿ ಪ್ರವೇಶಿಸುತ್ತೇವೆ. ನಮ್ಮನ್ನು ಶಾಲೆ, ಕಾಲೇಜುಗಳಲ್ಲಿ ಒಂದು ನಿರ್ದಿಷ್ಟ ತಂತ್ರಜ್ಞಾನದ ಹಾದಿಯಲ್ಲಿ ಒಬ್ಬ ವಿಜ್ಞಾನಿಯಗಲು, ಒಬ್ಬ ತಂತ್ರಜ್ಞ, ಒಬ್ಬ ವ್ಯಾಪಾರಿ ಅಥವಾ ಒಂದು ನಿರ್ದಿಷ್ಟ ವಿಷಯದಲ್ಲಿ ಪ್ರಾಧ್ಯಾಪಕರಾಗಲು, ಇತ್ಯಾದಿಯಾಗಿ ತರಬೇತಿಗೊಳಿಸಲಾಗುತ್ತದೆ. ಹಾಗೆ ನಮಗೆ ಇಪ್ಪತ್ತು-ಇಪ್ಪತ್ತೈದು ವರ್ಷಗಳ ಕಾಲ ತರಬೇತಿ ನೀಡಲಾಗುತ್ತದೆ, ಆನಂತರ ನಾವು ಜೀವನವನ್ನು ಪ್ರವೇಶಿಸಿದ್ದೇವೆ ಎಂದುಕೊಳ್ಳುತ್ತೇವೆ. ನಾವು ಜೀವನ ಎಂದೆನ್ನುವುದು, ಅಥವಾ ನಮ್ಮಲ್ಲಿನ ಹೆಚ್ಚಿನ ಜನ ಜೀವನ ಎಂದೆನ್ನುವುದು, ನಿಜವಾಗಲೂ ಒಂದು ನಿರ್ದಿಷ್ಟ ಮಾದರಿ, ಒಂದು ನಿರ್ದಿಷ್ಟ ಚೌಕಟ್ಟು, ಒಂದು ನಿರ್ದಿಷ್ಟ ಕಿರುದಾರಿಯಲ್ಲಿ ಹೊಕ್ಕುವುದು, ಆನಂತರ, ಸಾಧ್ಯವಾದರೆ, ಅದೇ ನಿರ್ದಿಷ್ಟ ಕಿರುದಾರಿಯಲ್ಲಿ, ಅದೇ ನಿರ್ದಿಷ್ಟ, ಸೀಮಿತ ತಂತ್ರಜ್ಞಾನದ ತರಬೇತಿಯಲ್ಲಿ ಹೋಗುತ್ತಾ ಇರುವುದಾಗಿದೆ. ದುರದೃಷ್ಟವಶಾತ್, ಆದಕ್ಕಾಗಿಯೇ ನಮ್ಮಲ್ಲಿನ ಹೆಚ್ಚಿನ ಜನ ಶಿಕ್ಷಣ ಪಡೆದಿದ್ದೇವೆ. ಅದು ನಮ್ಮ ಅಸ್ತಿತ್ವದ ಕೇವಲ ಒಂದು ಚಿಕ್ಕ ಭಾಗ ಮಾತ್ರ, ಒಂದು ಬಹಳ ಚಿಕ್ಕ ಭಾಗ - ಕಛೇರಿಗೆ ಹೋಗುವುದು, ಇನ್ನೂ ಒಳ್ಳೆಯ ಉದ್ಯೋಗಕ್ಕಾಗಿ ಬೇರೆಯವರೊಂದಿಗೆ ಸ್ಪರ್ಧಿಸುವುದು, ಮದುವೆಯಾಗುವುದು, ಮಕ್ಕಳನ್ನು ಪಡೆಯುವುದು, ಇತ್ಯಾದಿ. ಅದನ್ನೇ ನಾವು ಜೀವನ ಎನ್ನುತ್ತೇವೆ, ಮತ್ತು ಅದರೊಂದಿಗೆ ನಾವು ತೃಪ್ತಿಪಡುತ್ತೇವೆ.

> "ನೀವು ನಿಮ್ಮ ಮಕ್ಕಳಿಗೆ ಸ್ವಾತಂತ್ರ್ಯ ನೀಡದಿದ್ದರೆ,
> ಅವರು ಬೆಳೆದು ದೊಡ್ಡವರಾದಾಗ
> ಪರಿವಾರವನ್ನು ತೊರೆಯುತ್ತಾರೆ, ಆಗ,
> ನಿಮ್ಮ ಹೃದಯಗಳು ಛಿದ್ರವಾಗುತ್ತವೆ."
>
> **- ಜೆ. ಕೃಷ್ಣಮೂರ್ತಿ**

ಆದರೆ, ಗಮನಿಸಿ, ದುರದೃಷ್ಟವಶಾತ್ ಜೀವನದಲ್ಲಿ ಬೇರೆಯ ವಿಷಯಗಳಿವೆ. ನಿಮ್ಮ ವೈಯಕ್ತಿಕ ಅಥವಾ ನಿರ್ದಿಷ್ಟ ಜೀವನವಷ್ಟೇ ಅಲ್ಲ, ಸಾಮೂಹಿಕ ಜೀವನ, ಸಾಮಾಜಿಕ ಜೀವನ, ಸಮಾಜ ನೀವೇನು ಮಾಡಬೇಕು ಮತ್ತು ಮಾಡಬಾರದು ಎಂದು ಹೇಳುವುದರ ಜೀವನ ಕೂಡ ಇದೆ. ಮತ್ತೆ, ನಿಮ್ಮವೇ ಆದ ಆಕಾಂಕ್ಷೆಗಳು, ನಿಮ್ಮವೇ ಆದ ಆಸೆಗಳು, ನಿಮ್ಮವೇ ಆದ ಅವಶ್ಯಕತೆಗಳು ಅದರೊಂದಿಗೆ ಸಂಘರ್ಷಕ್ಕೊಳಗಾಗುತ್ತವೆ, ಮತ್ತದೂ ಕೂಡ ಜೀವನದ ಭಾಗವೇ. ಅದಕ್ಕಾಗಿ ನಾವೆಂದೂ ಶಿಕ್ಷಣ ಪಡೆದಿಲ್ಲ, ಅದರ ಬಗ್ಗೆ ನಮಗೆಂದೂ ಹೇಳಲ್ಪಟ್ಟಿಲ್ಲ. ಹಾಗಾಗಿ ನಾವು ಜೀವನವೆನ್ನುವ ಆ ಅಸಾಧಾರಣ ವಿಷಯವನ್ನು ಎದುರಿಸಿದಾಗ, ಒಂದು ವಿಶಾಲ ಸಮುದ್ರ, ಮಹಾಸಾಗರವನ್ನು ಎದುರಿಸಿದಂತೆ. ಮತ್ತು ನಮಗೆ ಗೊತ್ತಿರುವುದೆಲ್ಲಾ ನಾವು ಇಪ್ಪತ್ತು-ಇಪ್ಪತ್ತೈದು ವರ್ಷಗಳ ಕಾಲ ತೇಲಿಕೊಂಡುಹೋಗುತ್ತಿರುವ ಒಂದು ಸಣ್ಣ ನದಿಯಷ್ಟೇ, ಮತ್ತೆ ಧಿಡೀರಾಗಿ ನಾವು ಈ ಅಸಾಮಾನ್ಯ ನೀರಿನ ಹರವು, ಬಹಳ ಒರಟಾದ, ಅಪಾಯದಿಂದ ತುಂಬಿದ ಹರವಿಗೆ ಬರುತ್ತೇವೆ. ಜೀವನದ ಆಗಾಧವಾದ, ಆಳವರಿಯದ ಜಲರಾಶಿಯನ್ನು ಎದುರಿಸಲು ನಿಮಗೆ ಅಸಾಧಾರಣ ಕ್ಷಮತೆ ಖಂಡಿತ ಇರಬೇಕಾಗುತ್ತದೆ. ನೀವದನ್ನು ಎದುರಿಸಬೇಕು, ಆದರೆ ದುರದೃಷ್ಟವಶಾತ್ ಅದರ ಬಗ್ಗೆ ನಿಮಗೆಂದೂ ಕಲಿಸಿಲ್ಲ, ಏನನ್ನೂ ಹೇಳಿಲ್ಲ.

--------

ನನಗನ್ನಿಸುತ್ತದೆ, ಶಿಕ್ಷಣ ಅದೆಲ್ಲದರ ಸಮಗ್ರತೆ. ಅಂದರೆ, ಅಷ್ಟೇನೂ ಅಪಾಯವಿಲ್ಲದ ನದಿಯ ಮೇಲೆ ತೇಲುವುದು ಹೇಗೆ ಎಂದಷ್ಟೇ ಅಲ್ಲ, ಜೀವನದ ಯಾವುದೊಂದು ಸಮಯದಲ್ಲಿ ಸಮುದ್ರವನ್ನು, ಅದರೆಲ್ಲ ಬದಲಾವಣೆಗಳು, ಒಡಲಾಳದ ಪ್ರವಾಹಗಳು, ಬಲವಾದ ಮಾರುತಗಳು, ಭಯಾನಕ ಅಪಾಯಗಳೊಂದಿಗೆ ಎದುರಿಸುವುದು ಹೇಗೆ ಎಂದು ಅರಿಯುವುದಾಗಿದೆ. ಅವೆಲ್ಲವೂ ಜೀವನ. ನಾವು, ಒಂದು ನಿರ್ದಿಷ್ಟ ವಿಷಯ ಕಲಿಯಲು, ಸಾಮಾನ್ಯವಾಗಿ ತಂತ್ರಜ್ಞಾನದಲ್ಲಿ, ಒಂದು ನಿರ್ದಿಷ್ಟ ಮಾದರಿಯಲ್ಲಿ ಶಿಕ್ಷಣ ಪಡೆದಿದ್ದೇವೆ. ನಿಮಗೆ ವಿಜ್ಞಾನದಲ್ಲಿ ಆಸಕ್ತಿಯಿದ್ದರೆ, ನೀವು ಅದರಲ್ಲಿ ತರಬೇತಿ ಪಡೆಯುತ್ತೀರಿ.

ಬಹುಶಃ ನೀವು ಹಾರ್ವರ್ಡ್, ಎಮ್.ಐ.ಟಿ, ಕೇಂಬ್ರಿಡ್ಜ್, ಅಥವಾ ಕ್ಯಾಲ್ಟೆಕ್ ಗೆ ಹೋಗುತ್ತೀರಿ ಮತ್ತು ತರಬೇತಿ ಪಡೆಯುತ್ತೀರಿ. ಅಲ್ಲಿಯವರೆಗೆ, ನೀವು ಜೀವನದ ಸಾಗರವನ್ನು ಭೇಟಿಯಾಗುವವರೆಗೆ, ನೀವು ಸಾಕಷ್ಟು ಸುರಕ್ಷಿತರಾಗಿರುತ್ತೀರಿ. ಆಮೇಲೇನಾಗುತ್ತದೆ? ಅಲ್ಲಿ ನೀವು ಒಂದು ನಿರ್ದಿಷ್ಟ ಹಾದಿಯಲ್ಲಿ, ಒಂದು ನಿರ್ದಿಷ್ಟ ವಿಷಯದಲ್ಲಿ, ಒಂದು ನಿರ್ದಿಷ್ಟ ಕ್ರಮದಲ್ಲಿ ಆಲೋಚಿಸುವುದಕ್ಕಾಗಿ ತರಬೇತಿಗೊಳ್ಳುತ್ತೀರಿ, ಆನಂತರ ಜೀವನವನ್ನು ಎದುರಿಸುತ್ತೀರಿ. ಆಗ ಯುದ್ಧ ಪ್ರಾರಂಭವಾಗುತ್ತದೆ. ಅಲ್ಲಿ ಭಯಗಳಿರುತ್ತವೆ, ಆತಂಕಗಳಿರುತ್ತವೆ, ಹತಾಷೆ, ಆಳವಾದ ಪ್ರಶ್ನಿಸುವಿಕೆ ಇರುತ್ತವೆ.

ಅಂದರೆ ಜೀವನ ಅಸಾಮಾನ್ಯವಾದ ಸಂಕೀರ್ಣವಾಗುತ್ತದೆ - ಸಾವು ಎಂದರೇನು, ನಾವೇಕೆ ವೃದ್ಧರಾಗುತ್ತೇವೆ, ದೇವರಿದ್ದಾನೆಯೇ, ಅಧಿಕೃತವೆಂದರೇನು, ನಾವೇಕೆ ವಿಧೇಯರಾಗುತ್ತೇವೆ, ವಿಧೇಯತೆಯ ಅವಶ್ಯಕತೆಯೇನು ಎಂಬುದನ್ನೆಲ್ಲಾ ನಾವು ಕಂಡುಕೊಳ್ಳಬೇಕಾಗುತ್ತದೆ. ಜೀವನ

ಭಯಾನಕವಾಗಿ ಸಂಕೀರ್ಣವಾಗುತ್ತದೆ, ಮತ್ತು ನಮಗೆ ಈ ಅಸಾಮಾನ್ಯ ಸಂಕೀರ್ಣವಾದ, ಪರಸ್ಪರ ಸಂಬಂಧಿತ ಮಾನವನ ಅಸ್ತಿತ್ವಕ್ಕೆ ಸರಳವಾದ ಉತ್ತರ ಬೇಕೆನಿಸುತ್ತದೆ. ತಜ್ಞರು ನಮಗೆ ಸುಲಭವಾದ ಉತ್ತರಗಳನ್ನು ಕೊಡುತ್ತಾರೆ - ಸಮಾಜವಾದಿಯಾಗು, ನೀನು ಈ ಅಸ್ತಿತ್ವದ ಅಸಾಮಾನ್ಯ ಸಮಸ್ಯೆಯನ್ನು ಪರಿಹರಿಸಬಲ್ಲೆ, ಅಥವಾ ಕಮ್ಯುನಿಷ್ಟನಾಗು, ಟ್ರೋಟ್ಸ್ಕಿ ಅಥವಾ ಸ್ಟಾಲಿನ್ ಅಥವಾ ಮಾರ್ಕ್ಸ್ ಇತ್ಯಾದಿಗಳ ವಿಶಿಷ್ಟ ಹಾದಿಯಲ್ಲಿ ಆಲೋಚಿಸು, ಎಲ್ಲವೂ ಪರಿಹಾರಗೊಳ್ಳುತ್ತವೆ. ಅಥವಾ ನೀನು ಗಾಂಧಿವಾದಿಯಾಗು, ಅದರದ್ದೇ ಆದ ಕಲ್ಪಿತ ಅಥವಾ ನಿಜವಾದ ತತ್ವ ಮತ್ತು ಸಿದ್ಧಾಂತಗಳೊಂದಿಗೆ. ಹೀಗೆ, ನಾವು ಶಿಕ್ಷಣವೆನ್ನುವ ಒಂದು ನಿರ್ದಿಷ್ಟ ತಂತ್ರಜ್ಞಾನದ ಹಾದಿಯ ತರಬೇತಿಯನ್ನು ಪಡೆದು, ಈ ಜೀವನವೆನ್ನುವ, ಅದರ ಸಂಕೀರ್ಣತೆಯಿಂದಾಗಿ ಭಯಾನಕ ಕ್ಷೋಭೆಯುಂಟುಮಾಡುವ, ಅಸಾಮಾನ್ಯ ವಿಷಯವನ್ನು ಎದುರಿಸುತ್ತೇವೆ, ಮತ್ತು ನಾವದಕ್ಕೆ ನಾವು ಎದುರಿಸುವ ಎಲ್ಲದಕ್ಕು ಉಪಯೋಗವಾಗಬಲ್ಲಂತಹ ಸರಳ ಉತ್ತರ ಹುಡುಕುತ್ತೇವೆ. ಅಲ್ಲಿ ಸರಳ ಉತ್ತರವಿಲ್ಲ. ಕಮ್ಯುನಿಷ್ಟನಾಗಲೀ, ಸಮಾಜವಾದಿಯಾಗಲೀ, ಬಂಡವಾಳಶಾಹಿಯಾಗಲೀ, ಗಾಂಧಿವಾದಿಯಾಗಲೀ ಸರಳ ಉತ್ತರ ಹೊಂದಿಲ್ಲ. ಅಂದರೆ, ಯಾವುದೇ ವಿದ್ಯಾವಂತ, ಬುದ್ಧಿವಂತ ಮನಸ್ಸು ಅರಿತುಕೊಳ್ಳಬೇಕಾದ ಮೊದಲನೇ ವಿಷಯ ಅದೇ - ಯಾವುದೇ ನಿರ್ದಿಷ್ಟ ಹಾದಿಯಲ್ಲೂ ಸುಲಭ ಉತ್ತರವಿಲ್ಲ.

ದೇವರನ್ನು ಬಯಸುವುದಕ್ಕೂ ಸುಲಭ ಉತ್ತರವಿಲ್ಲ; ಅದೇ ಅತ್ಯಂತ ಸಂಕೀರ್ಣ ವಿಷಯ. ಈ ಅತ್ಯಂತ ಸಂಕೀರ್ಣ ಜೀವನವನ್ನೆದುರಿಸುತ್ತಾ ಮತ್ತು ಕ್ಷೋಭೆಗೊಳಗಾಗುತ್ತಾ, ನಾವು ದೇವರನ್ನು ಕಾಣಲು ಸಾಧ್ಯವಾದರೆ, ನಮ್ಮನ್ನು ನೋಡಿಕೊಳ್ಳುತ್ತಿರುವ, ನಮ್ಮ ಬೆನ್ನು ತಟ್ಟುತ್ತಿರುವ, ನಾವು ಕ್ಷೋಭೆಗೊಳಗಾದಾಗ ನಮ್ಮ ಕೈಗಳನ್ನು ಹಿಡಿದುಕೊಂಡಿರುವ ದೇವನೊಬ್ಬನಿದ್ದಾನೆಂದು ನಾವು ನಂಬುವುದಕ್ಕಾದರೆ, ನಾವು ಹಿತವನ್ನೂ, ಆನಂದವನ್ನೂ ಅನುಭವಿಸಬಹುದು ಎನ್ನುತ್ತೇವೆ. ಅಂದರೆ, ಜೀವನದ ಈ ಅಸಾಮಾನ್ಯ ಸಾಗರವನ್ನು ತಮ್ಮತಮ್ಮದೇ ನಿರ್ದಿಷ್ಟ ಕಿಟಕಿಯ ಮೂಲಕ ನೋಡುವ ಧಾರ್ಮಿಕ ಜನರು, ಸಾಮಾಜ ಸೇವಕರು, ಸಮಾಜ ಸುಧಾರಕರು, ಕಮ್ಯುನಿಷ್ಟರು, ಸಮಾಜವಾದಿಗಳು, ಎಡ, ಬಲ ಮತ್ತು ಮಧ್ಯಮ ಮಾರ್ಗದವರು, ಇದ್ದಾರೆ. ಮತ್ತೆ, ರೋಮನ್ ಕ್ಯಾಥೋಲಿಕರು, ಕ್ಯಾಥೋಲಿಕ್ ವಿರೋಧಿಗಳು, ಹಿಂದುಗಳು, ಬೌದ್ಧರು, ಮುಸ್ಲಿಮರು ಇದ್ದಾರೆ, ಎಲ್ಲರೂ ತಮ್ಮ ಸಣ್ಣ ಕಿಟಕಿಯಿಂದ ಸಾಗರದೆಡೆ ನೋಡುವವರು.

> "ಮಾನವನ ಬದುಕಿನ ಮುಖ್ಯ ಉದ್ದೇಶವೆಂದರೆ
> ತನ್ನ ಅಪರಿಪೂರ್ಣತೆಯಿಂದ ಪ್ರಜ್ಞಾಪೂರ್ವಕ ಪರಿಪೂರ್ಣತೆಯ
> ಕಡೆಗೆ ಸಾಗುವುದು ಮತ್ತು ಅದನ್ನ
> ಪ್ರತಿಯೊಬ್ಬರೂ ಸ್ವತಃ ಮಾಡಬೇಕಾದ್ದು."
>
> **- ಜೆ. ಕೃಷ್ಣಮೂರ್ತಿ**


ಹಾಗಾದರೆ ಯಾರೇನು ಮಾಡಬಲ್ಲರು? ನಿಮಗಿದು ಅರ್ಥವಾಗುತ್ತದೆಯೇ? ಇಲ್ಲಿ, ನೀವು ಪರೀಕ್ಷೆಗಳಲ್ಲಿ ಉತ್ತೀರ್ಣಗೊಳ್ಳಲು ತರಬೇತಿಗೊಳ್ಳುತ್ತಾ ಇದ್ದೀರಿ. ಅದಷ್ಟೇ ನಿಮ್ಮ ಕಳಕಳಿ, ಶಿಕ್ಷಣವಲ್ಲ, ಹೆಚ್ಚು ಕಲಿಯುವುದಲ್ಲ, ಹೆಚ್ಚು ಶಕ್ತಿ ವ್ಯಯಿಸುವುದಲ್ಲ, ಹೆಚ್ಚಿನ ಸಾಮರ್ಥ್ಯ ಹೊಂದುವುದಲ್ಲ, ಹೆಚ್ಚು ಸಾಹಸವಲ್ಲ, ಅಥವಾ ಕೇವಲ ಪದಗಳಾಚೆಯದನ್ನು ಹುಡುಕುವುದಲ್ಲ. ನೀವು ವಿಜ್ಞಾನ, ಗಣಿತ, ಭೂಗೋಳ, ಅಥವಾ ಇತಿಹಾಸ ಕಲಿಯುವಾಗ, ಕೇವಲ ಒಂದು ಮಾದರಿಯ ಪಠ್ಯದ ಪ್ರಕಾರ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದರಲ್ಲಿ ತೃಪ್ತರಾಗಿದ್ದೀರಿ. ಅದಷ್ಟೇ ನಿಮ್ಮ ಕಾಳಜಿ, ಮತ್ತು ಅದಷ್ಟೇ ಬಹುತೇಕ ಅಧ್ಯಾಪಕರ ಕಾಳಜಿಯೂ ಕೂಡ. ಅಂದರೆ, ನೀವು ಈ ಬಹಳ ಸಣ್ಣ, ಕಿರಿದಾದ, ಚಿಕ್ಕ ದಾರಿಯಲ್ಲಿ ಆಲೋಚನೆ ಮಾಡಲು ಮೂವತ್ತು ವರ್ಷಗಳ ಕಾಲ ತರಬೇತಿಗೊಂಡಿದ್ದೀರಿ.

ಏಕೆಂದರೆ, ಒಂದಷ್ಟು ಹಣ ನೀಡುವ ಉದ್ಯೋಗ ಪಡೆಯುವುದಷ್ಟೇ ನಮ್ಮ ಕಾಳಜಿಯಾಗಿದೆ. ಅದಾದ ನಂತರ, ನಾವು ಕ್ಷೋಭೆಗೊಳಗಾಗಲು ಬಯಸುವುದಿಲ್ಲ, ಹಾಗಾಗಿ ನಮಗೆ ತೃಪ್ತಿನೀಡಬಲ್ಲ ಏನನ್ನಾದರೂ ಹುಡುಕುತ್ತೇವೆ. ಬಾಲ್ಯದಿಂದ ನಮಗೆ ಹೇಳಿಲ್ಲ, ನಾವು ಜಿಜ್ಞಾಸೆ ಮಾಡಲು, ನೋಡಲು, ಪುಸ್ತಕದಾಚೆ ಹೋಗಲು, ಪ್ರಶ್ನಿಸಲು, ಕೇಳಲು, ಒತ್ತಾಯಿಸಲು ಪ್ರೋತ್ಸಾಹಿಸಲ್ಪಟ್ಟಿಲ್ಲ ಎನ್ನುವ ದೃಶ್ಯ ನಿಮ್ಮ ಕಣ್ಣಿಗೆ ಕಟ್ಟುತ್ತಿದೆ ಅಲ್ಲವೇ. ಅಧ್ಯಾಪಕರಿಗೆ ನೀವು ಅತಿಯಾಗಿ ಪ್ರಶ್ನಿಸುವುದು ಬೇಕಿಲ್ಲ, ಬಹುಶಃ ಆ ಬಡಪಾಯಿಗೂ ಗೊತ್ತಿಲ್ಲ. ನಿಮ್ಮ ಪ್ರಶ್ನಿಸುವಿಕೆ ಆತನನ್ನು ಕ್ಷೋಭೆಗೊಳಿಸುತ್ತದೆ, ಮತ್ತು ಅದರಿಂದ ಆತ ನಿಮಗೆ ಪುಸ್ತಕದ ಕಡೆ ಹೆಚ್ಚು ಗಮನಹರಿಸಲು ಹೇಳುತ್ತಾನೆ. ಹಾಗಾಗಿ ನೀವು ಇದನ್ನೆ ಮುಂದುವರೆಸುತ್ತೀರಿ; ಇಪ್ಪತ್ತೈದು ಅಥವಾ ಮೂವತ್ತು ವರ್ಷ ನೀವು ಹೀಗೇ ನಡೆಯುತ್ತೀರಿ. ಆಮೇಲೆ ನೀವು ಇದ್ದಕ್ಕಿದ್ದಂತೆಯೇ ಮದುವೆಯಾಗುತ್ತೀರಿ, ಕೂಡಲೇ ನೀವು ಉದ್ಯೋಗ ಪಡೆಯಬೇಕು; ಆಗಲ್ಲಿ ನೀವು ಜೀವನವೆಂಬುವುದರಲ್ಲಿ ಧುಮುಕಿ, ಜೀವನದ ಈ ಎಲ್ಲ ಸಂಕೀರ್ಣತೆಗೂ ಒಂದು ಸರಳ ಉತ್ತರ, ಒಂದು ಸರಳ ಪರಿಹಾರ, ಬಯಸುತ್ತೀರಿ. ಆದರೆ ಅಲ್ಲಿ ಸರಳ ಉತ್ತರವಿಲ್ಲ.

ಹಾಗಿದ್ದರೆ ಯಾರಾದರೂ ಏನು ಮಾಡಬಲ್ಲರು? ನಿಮ್ಮ ಮುಂದೆ ನಾವಿಡುತ್ತಿರುವ ಸಮಸ್ಯೆ ನಿಮಗರ್ಥವಾಗುತ್ತಿದೆಯೇ?

ಈ ಕಷ್ಟವನ್ನು ನೋಡಿ: ಬಹುತೇಕ ಶಿಕ್ಷಣ ಸಂಸ್ಥೆಗಳಿಗೆ ನೀವು ಯಾವ ಬಗೆಯ ಜೀವನ ನಡೆಸುತ್ತೀರೆಂಬ ಬಗ್ಗೆಯಾಗಲೀ, ನಿಮ್ಮ ಹೆಂಡತಿ ಅಥವಾ ಗಂಡಂದಿರೊಡನೆ, ಮತ್ತು ನಿಮ್ಮ ಸಮಾಜದೊಡನೆ, ನಿಮ್ಮ ಸಂಬಂಧ ಹೇಗಿರಬಹುದೆಂಬ ಬಗ್ಗೆಯಾಗಲೀ; ನೀವು ಹಲವು ಸಂಘರ್ಷಗಳನ್ನು, ಹಲವು ಹತಾಶೆಗಳನ್ನು ಹೇಗೆ ಪರಿಹರಿಸಿಕೊಳ್ಳುವಿರೆಂಬುದರ ಬಗ್ಗೆಯಾಗಲೀ ಕಾಳಜಿಯಿಲ್ಲ. ಬಹುತೇಕ ಶಾಲೆಗಳು, ಬಹುತೇಕ ಕಾಲೇಜುಗಳಿಗೆ ಆ ಬಗ್ಗೆ ಕಾಳಜಿಯೇ ಇಲ್ಲ. ನಿಮಗೆ, ಗ್ರಾಮಫೋನಿನ ತರಹ ಮತ್ತೆ ಮತ್ತೆ ಅದನ್ನೇ ಪುನರುಚ್ಚರಿಸುವ, ಹಾಗೂ ಪರೀಕ್ಷೆಯಲ್ಲಿ ಪ್ರಶ್ನೆಗಳಿಗೆ ಉತ್ತರಿಸುವ, ಒಂದು ಬಗೆಯ ಪುಸ್ತಕದ ಕಲಿಕೆ ಸಿಗಬೇಕೆಂಬುವದಷ್ಟೇ ಅವುಗಳ ಬಹುಮುಖ್ಯ ಕಾಳಜಿಯಾಗಿದೆ. ಆಮೇಲೆ, ಸ್ನಾತಕ, ಸ್ನಾತಕೋತ್ತರ, ಮತ್ತು ಪಿ.ಎಚ್.ಡಿ ಪದವೀಧರರಾಗಿ, ಈ ಕುರೂಪ, ಭ್ರಷ್ಟಾಚಾರ, ಮೃಗೀಯ ಮತ್ತು ಹಿಂಸೆಯಿಂದೊಡಗೂಡಿದ ಸಮಾಜದ ಜೊತೆ ಹೋರಾಡಲು, ಯುದ್ಧಮಾಡಲು ಬೇಕಾಗುವಷ್ಟು ಜೀವಶಕ್ತಿ ಉಳಿದಿರದಂತಹ ಸ್ಥಿತಿಯಲ್ಲಿ ನೀವಿದ್ದೀರಿ. ಹೋರಾಟಕ್ಕೆ ಬುದ್ಧಿವಂತಿಕೆ ಬೇಕು. ಆದರೆ ನಿಮ್ಮನ್ನು ಬುದ್ಧಿವಂತರಾಗಿರಲು ತರಬೇತಿಗೊಳಿಸಲಾಗಿಲ್ಲ. ನಿಮ್ಮನ್ನು ಚತುರರಾಗಿರಲು, ಕುಟಿಲರಾಗಿರಲು, ಒಂದು ಉದ್ಯೋಗ ಪಡೆಯಲು, ಮತ್ತದನ್ನ ಘಟ್ಟಿಯಾಗಿ ಹಿಡಿದುಕೊಂಡಿರಲು, ಸಾಧ್ಯವಾದರೆ ಮೋಸಮಾಡಲು, ಭ್ರಷ್ಟರಾಗಿರಲು ತರಬೇತುಗೊಳಿಸಲಾಗಿದೆ. ನೀವು ನಡೆಯುತ್ತಿರುವ ಇವೆಲ್ಲವನ್ನೂ ನೋಡಿ. ಹೀಗಿದ್ದಾಗ, ಯಾರಾದರೂ ಬುದ್ಧಿವಂತಿಕೆ ಹೊಂದುವುದು ಹೇಗೆ? ನಾನು ಹೇಳುತ್ತಿರುವುದು ಸ್ಪಷ್ಟವಾಗಿದೆಯೇ?

**ಮೂಲ: “Does School Prepare You for Life”**
**–J.Krishnamurti**



# ಒಳಗಿನ ಅರಳುವಿಕೆ - ಜೆ. ಕೃಷ್ಣಮೂರ್ತಿ

ನನಗನಿಸುತ್ತೆ, ಈ ಬೆಳಗ್ಗೆ ಈ ಗುಂಪಿನ ಪ್ರತಿಯೊಬ್ಬರೂ, ನಾವೆಲ್ಲರೂ ಜೊತೆಯಾಗಿ ಅರಳುತ್ತಿದ್ದೆವೆಯೇ ಎಂದು? ನಮ್ಮೊಳಗೇ ನಾವು ಬೆಳೆಯುತ್ತಿದ್ದೆವೆಯೇ ಎಂದು? ಈ ವಿಷಯದ ಕುರಿತಾಗಿ ಮಾತನಾಡುವುದು ಸೂಕ್ತ ಎಂದೆನಿಸುತ್ತದೆ. ಅಥವಾ ನಾವು ಪ್ರತಿಯೊಬ್ಬರೂ ಕೆಲವೊಂದು ದೀರ್ಘವಾದ ಸಂಕುಚಿತ ಪಥವನ್ನು ಅನುಸರಿಸುತ್ತಿದ್ದೆವೆಯೇ? ನಮ್ಮ ಬದುಕಿನ ಕೊನೆಗಾಲದಲ್ಲಿ ಸಂಪೂರ್ಣವಾಗಿ ಅರಳುವ ಅವಕಾಶವನ್ನು ಬಳಸಿಕೊಳ್ಳದಿರುವುದಕ್ಕೆ, ನಮ್ಮುಳಿದ ಬದುಕನ್ನು ಪಶ್ಚಾತಾಪದಿಂದಲೇ ಕಳೆಯಬೇಕೆ? ಎಂಬುದರ ಕುರಿತಾಗಿ ಹೋಗೋಣವೇ?

ಕೇವಲ ಬ್ರೊಕ್ವುಡ್ ನ ವಿದ್ಯಾರ್ಥಿಗಳಾಗಿ ಮಾತ್ರವಲ್ಲದೆ ಒಬ್ಬ ಶಿಕ್ಷಿತರಾಗಿಯೂ ನಾವು ನಮ್ಮನ್ನು ಕೇಳಿಕೊಳ್ಳಬೇಕಿದೆ, ನಾವು ಆಂತರಿಕವಾಗಿ ಮತ್ತು ಪ್ರಾಯಶಃ ಬಾಹ್ಯವಾಗಿಯೂ - ಇವೆರಡೂ ನಿಜವಾಗಿಯೂ ಪರಸ್ಪರ ಸಂಬಂಧಿಗಳೋ - ಜೊತೆಗೆ ನಾವೂ ಬೆಳೆಯುತ್ತಿದ್ದೆವೆಯೇ ಏನೋ, ಅಂದ್ರೆ ಶಾರೀರಿಕವಾಗಿ ಶಕ್ತಿಯುಳ್ಳವರಾಗುವುದೋ, ಎತ್ತರಕ್ಕೆ ಬೆಳೆಯುವುದೋ ಅಲ್ಲ, ಬದಲಾಗಿ ಮಾನಸಿಕವಾಗಿಯೂ, ಒಳಗಿನಿಂದಲೂ ನಾವು ಅರಳಬೇಕು.

ಅರಳುವಿಕೆ ಎಂಬ ಶಬ್ದದ ಬಗ್ಗೆ ನಾನು ಹೇಳುವುದೇನೆಂದರೆ, ಅದು ನಮ್ಮನ್ನು ಹಿಂಜರಿಸುವುದಿಲ್ಲ, ಒಳಗಿಂದ ಆಳವಾಗಿ ಬೆಳೆಯುವಲ್ಲಿ ನಮ್ಮನ್ನದು ತಡೆಯುವುದಿಲ್ಲ. ನಮ್ಮಲ್ಲಿ ಹೆಚ್ಚಿನವರು ಬಹಳ ಅಪರೂಪಕ್ಕೆ ಅರಳುತ್ತಾರೆ, ಬೆಳೆಯುತ್ತಾರೆ ಹಾಗೂ ಬೆಳಗುತ್ತಾರೆ. ಬದುಕಿನ ಯಾತ್ರೆಯಲ್ಲಿ ಏನಾದರು ಘಟಿಸಿದರೆ, ಅದು ನಮ್ಮನ್ನು ಕಡಿಮೆ ಸ್ಪಂದನಶೀಲರನ್ನಾಗಿಸುವುದು, ನಿರುತ್ಸಾಹಿಗಳನ್ನಾಗಿಸುವುದು. ಅದ್ದರಿಂದ ನಮ್ಮ ಬದುಕಿಗೆ ಬೇಕಾಗುವ ಅತ್ಯಗತ್ಯವಾದ ಒಳಗು ಅಲ್ಲಿ ಬೆಳೆಯುವುದಿಲ್ಲ. ಪ್ರಾಯಶಃ ನಮ್ಮ ಸುತ್ತಲಿನ ಜಗತ್ತು ನಮ್ಮನ್ನು ಹೆಚ್ಚು ನೈಪುಣ್ಯ ಉಳ್ಳವರನ್ನಾಗಿಸುವಂತೆ ಬೇಡುತ್ತದೆ - ವೈದ್ಯರು, ವಿಜ್ಞಾನಿಗಳು, ಭೂಗೋಳ ಶಾಸ್ತ್ರಜ್ಞರು, ತತ್ವ ಶಾಸ್ತ್ರಜ್ಞರು ಮತ್ತು ಹೀಗೆ ಪಟ್ಟಿ ಬೆಳೆಯುತ್ತದೆ ; ಆದುದರಿಂದಲೇ ಮಾನಸಿಕವಾಗಿ ಕ್ಷಿಪ್ರ ಗತಿಯಲ್ಲಿ ನಮಗೆ ಬೆಳೆಯಲಾಗದಿರುವುದಕ್ಕೆ ಇದೊಂದು ಕಾರಣವಿರಬೇಕು. ಇದು ನಾವೆಲ್ಲರು ಜೊತೆಯಲ್ಲಿ ಮಾತನಾಡುವಂತಹ ಒಂದು ಪ್ರಶ್ನೆಯಾಗಿದೆ. ಒಂದು ಸಣ್ಣ ಶಿಕ್ಷಕರ ಗುಂಪಿಗೆ ಮತ್ತು ಇಲ್ಲಿ ಜೊತೆಯಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳಿಗೆ ಅರಳಲು ಏನು ತಡೆ ಒಡ್ಡುತ್ತದೆ? ನಮ್ಮ ಸಮಾಜದಿಂದ, ಪೋಷಕರಿಂದ, ಧರ್ಮದಿಂದ ಮತ್ತು ನಮ್ಮ ನಮ್ಮ ಜ್ಞಾನದಿಂದ ನಾವು ಹೆಚ್ಚು ಪೂರ್ವಾಗ್ರಹ ಪೀಡಿತರಾಗಿದ್ದೇವೆಯೇ? ಈ ಎಲ್ಲಾ ಪ್ರಾಕೃತಿಕ ಪ್ರಭಾವಗಳು ನಿಜಾರ್ಥದಲ್ಲಿ ಅರಳುವಿಕೆಗೆ ಅಡೆ - ತಡೆಗಳಾಗುತ್ತವೆಯೋ? ನನ್ನ ಪ್ರಶ್ನೆ ಅರ್ಥವಾಯಿತೇ? ನಿಮಗೆ ಅರ್ಥವಾಗಲಿಲ್ಲವೇ?

> "ಒಳ್ಳೆಯತನ ವೈಯುಕ್ತಿಕ ಹಿತ್ತಿಲಿನಲ್ಲಾಗಲೀ,
> ಸಾಮೂಹಿಕ ಬಯಲಿನಲ್ಲಾಗಲೀ ಇಲ್ಲ;
> ಅವೆರೆಡರಿಂದ ಸ್ವತಂತ್ರರಾದಲ್ಲಿ ಮಾತ್ರ
> ಒಳ್ಳೆಯತನ ಅರಳುತ್ತದೆ."
>
> **- ಜೆ. ಕೃಷ್ಣಮೂರ್ತಿ**

ನೋಡು! ನಾನೊಬ್ಬ ಕಥೋಲಿಕ್ ಆಗಿದ್ದರೆ ನನ್ನ ಮನಸ್ಸು, ಮಿದುಳು, ನನ್ನ ಸಂಪೂರ್ಣ ಮಾನಸಿಕಾವಸ್ಥೆಯು ಮೊದಲೇ ಪೂರ್ವಾಗ್ರಹ ಪೀಡಿತವಾಗಿರುತ್ತದೆ, ಅಲ್ಲವೇ? ನನ್ನ ಹೆತ್ತವರು ಹೇಳುತ್ತಾರೆ ನಾನೊಬ್ಬ ಕ್ಯಾಥಲಿಕ್, ನಾನು ಇಗರ್ಜಿಗೆ ಹೋಗಬೇಕು ; ಅಲ್ಲಿನ ಸಾಮೂಹಿಕ ಪ್ರಾರ್ಥನೆ, ಸುಂದರತೆ, ಸುಗಂಧ ಪರಿಮಳ, ಹೊಸ ಹ್ಯಾಟು- ಸೂಟು ಧರಿಸಿದ ಜನರು ಪರಸ್ಪರರನ್ನು ನೋಡುವುದು, ಮಂತ್ರ ಪಠಿಸುವ ಪುರೋಹಿತ - ಇವೆಲ್ಲವೂ ನಮ್ಮ ಮನಸ್ಸನ್ನು ಪೂರ್ವಾಗ್ರಹ ಪೀಡಿತರನ್ನಾಗಿಸುತ್ತವೆ ಮತ್ತು ಯಾವತ್ತೂ ನಮ್ಮನ್ನು ಅರಳಲು ಸಮ್ಮತಿಸುವುದಿಲ್ಲ. ನಿಮಗೆ ಅರ್ಥವಾಯಿತೇ? ಕೆಲವೊಂದು ಸಂಕುಚಿತ ರೀತಿಯಲ್ಲಿ, ನಿರ್ದಿಷ್ಟ ಮಾರ್ಗದಲ್ಲಿ ನಿರ್ದಿಷ್ಟ ವ್ಯವಸ್ಥೆಯಲ್ಲಿ ನಡೆದರೆ, ಮತ್ತು ಅನಿರ್ದಿಷ್ಟ ಪಥ, ವ್ಯವಸ್ಥೆ, ಚಟುವಟಿಕೆಯು ದೌರ್ಬಲ್ಯ - ಆದುದರಿಂದ ಅಲ್ಲಿ ಯಾವತ್ತಿಗೂ ಅರಳುವುದು ಸಾಧ್ಯವಿಲ್ಲ. ಈಗ ನನ್ನ ಪ್ರಶ್ನೆ ಅರ್ಥವಾಯಿತೇ? ಅದೇನಾ ಇಲ್ಲಿಯೂ ನಡೆಯುತ್ತಿರುವುದು? ಹಲವು ಅಪಘಾತಗಳಿಂದ, ಘಟನೆಗಳಿಂದ, ಒತ್ತಡಗಳಿಂದ, ಕಠಿಣಗಳಿಂದ - ಹೆತ್ತವರು, ಸಮಾಜ ಮತ್ತುಳಿದ ಎಲ್ಲದುದರಿಂದಲೂ ಪೂರ್ವಾಗ್ರಹ ಪೀಡಿತರಾಗಿ ನಮಗೆ ಸೂಕ್ತ ರೀತಿಯಲ್ಲಿ ಸುಲಭವಾಗಿ, ಆನಂದದಿಂದ ಹರಿಯಲು ಜೊತೆಗೆ ಬೆಳೆಯಲು ಆಗುತ್ತಿಲ್ಲವೇ? ಅದೇ ಒಂದು ಕಾರಣ ಎಂದಾದರೆ, ಈ ಪುರ್ವಾಗ್ರಹವನ್ನು ಮುರಿಯಲು ಬ್ರೊಕ್ವುಡ್ ತಯಾರಿದೆಯೇ? ನೀವು ನನ್ನ ಪ್ರಶ್ನೆಯನ್ನು? ಹಿಂಬಾಲಿಸುತ್ತಿರಾ ಅದಿಲ್ಲವಾದಲ್ಲಿ, ಏನರ್ಥವಿದೆ ಅದಕ್ಕೆ? ನೀವು, ಬ್ರೊಕ್ವುಡ್ ನವರು ಜಗತ್ತಿನ ಇತರ ಮಿಲಿಯನ್ ಜನರಂತೆ ಈ ಆಳವಾದ ಪ್ರಜ್ಞೆ, ಹರಿವು, ಅರಳುವಿಕೆಯನ್ನು ಅನುಭವಿಸಲಿಲ್ಲವೇ ಅಥವಾ ಪ್ರಶ್ನಿಸಲಿಲ್ಲವೇ, ಆ ರೀತಿ ಬದುಕಲಿಲ್ಲವೇ? ನಿಮಗೆ ನನ್ನ ಪ್ರಶ್ನೆ ಅರ್ಥವಾಯಿತೇ?

**ಮೂಲ: "Inward Flowering"**

**-J.Krishnamurti**

# ಬೇಸರಿಕೆ ಮತ್ತು ಮನರಂಜನೆಯ ಉದ್ಯಮ - ಜೆ. ಕೃಷ್ಣಮೂರ್ತಿ

ಈ ಪ್ರಪಂಚದಲ್ಲಿ ನಮ್ಮ ಗಮನವನ್ನು ಬೇರೆ ಕಡೆ ಸೆಳೆಯುವ ಮನರಂಜನೆಗಳಲ್ಲಿ ಬಹುತೇಕ ಎಲ್ಲರೂ ಪ್ರೇಕ್ಷಕರಾಗಿರುವುದು ಮತ್ತು ಕೆಲವೇ ಮಂದಿ ಅದರಲ್ಲಿ ತೊಡಗಿಕೊಂಡಿರುವುದು ಸೋಜಿಗವಲ್ಲವೇ? ನಮಗೆ ಸ್ವಲ್ಪವೇ ಬಿಡುವಿನ ವೇಳೆಯಲ್ಲಿ ನಾವು ಬಹಳಷ್ಟು ಜನ ಆಮೋದ-ಪ್ರಮೋದಗಳನ್ನು ಬಯಸುತ್ತೇವೆ. ಯಾವುದಾದರೂ ಗಹನೂಪ್ರಸ್ತಕ, ಕಾದಂಬರಿಯನ್ನೋ ಅಥವಾ ಕೈಗತ್ತಿ ಪತ್ರಿಕೆಗಳನ್ನೋ ಆರಿಸಿಕೊಳ್ಳುತ್ತೇವೆ. ನಾವು ಅಮೇರಿಕಾದಲ್ಲಿದ್ದರೆ ರೇಡಿಯೋ ಅಥವಾ ದೂರದರ್ಶನ ಹಾಕಿಕೋಳ್ಳುತ್ತೇವೆ ಅಥವಾ ಎಡೆಬಿಡದ ಹರಟೆಯಲ್ಲಿ ತೊಡಗುತ್ತೇವೆ. ನಮ್ಮನ್ನು ನಮ್ಮಿಂದಲೇ ದೂರಮಾಡುವ ಆಮೋದ-ಪ್ರಮೋದಗಳನ್ನು ನಿರಂತರ ಬೇಡಿಕೆಯಿದೆ. ನಾವು ಏಕಾಂಗಿಯಾಗಿರಲು ಭಯಪಡುತ್ತೇವೆ, ಇನ್ನೊಬ್ಬರು ಜೊತೆ ಇಲ್ಲದಿದ್ದರೆ ಭೀತಿಗೊಳಗಾಗುತ್ತವೆ ಅಥವಾ ಇನ್ನೇನನ್ನಾದರೂ ಅವಲಂಬಿಸುತ್ತೇವೆ. ನಾವು ಕೆಲವೇ ಜನ ಮಾತ್ರ ಗಂಭೀರ ನಡಿಗೆಯಲ್ಲಿ- ಯಾವುದೇ ಮಾತು, ಹಾಡು ಹರಟೆಯಿಲ್ಲದೆ, ಸುತ್ತಮುತ್ತ ಗಮನಿಸುತ್ತಾ ನಮ್ಮನೇ ನಾವು ಗಮನಿಸುತ್ತಾ- ತೊಡಗುತ್ತೇವೆ. ಬಹಳಷ್ಟು ಮಂದಿ ಈ ಗಮನವನ್ನೂ ಕೊಡುವುದಿಲ್ಲ, ಏಕೆಂದರೆ ನಾವು ದೈನಂದಿನ ಕರ್ಮಗಳಲ್ಲಿ, ಕೆಲಸಗಳಲ್ಲಿ ಬೇಜಾರಾಗಿದ್ದೇವೆ, ಆದ್ದರಿಂದ, ನಮಗೆ ಸಿಕ್ಕ ಬಿಡುವಿನ ವೇಳೆಯಲ್ಲಿ ಆಮೋದದಲ್ಲಿ ತೊಡಗುತ್ತೇವೆ. ಏನಾದರೂ ಓದುವುದರಲ್ಲೋ, ಸಿನಿಮಾ ವೀಕ್ಷಣೆಯಲ್ಲೋ, ಯಾವುದಾದರೂ ಧಾರ್ಮಿಕ ವಿಧಿ-ವಿಧಾನದಲ್ಲೋ ತೊಡಗುತ್ತೇವೆ. ಧರ್ಮವೂ ಸಹ ನಮ್ಮ ನಿತ್ಯ ಜೀವನದ ಬೇಸರದಿಂದ ಹೊರಬರುವ ಪಲಾಯನವಾಗಿದೆ.

"ಧ್ಯಾನದ ತಿರುಳೆಂದರೆ
ವಿಚಾರದಿಂದ ಪ್ರೇರಿತವಾದ ಹಾದಿಯನ್ನು
ತುಳಿಯದಿರುವುದು."

**- ಜೆ. ಕೃಷ್ಣಮೂರ್ತಿ**

ನೀವೆಲ್ಲಾ ಇದನ್ನು ಗಮನಿಸಿದ್ದೀರೋ ಇಲ್ಲವೋ ನನಗೆ ತಿಳಿಯದು. ಬಹಳಷ್ಟು ಜನರು ನಿರಂತರವಾಗಿ ಪೂಜೆಯಲ್ಲಿ, ಜಪದಲ್ಲಿ, ಇದಕ್ಕೆ ಸಂಬಂಧಿಸಿದ ಕಳವಳದಿಂದ ಆಕ್ರಮಿಸಿಕೊಂಡಿದ್ದಾರೆ. ಯಾಕೆಂದರೆ, ಯಾವುದಕ್ಕಿಂತ ತಮ್ಮಲ್ಲಿ ತಾವು ಏಕಾಂತದಲ್ಲಿರಲು ಭಯಗೊಂಡು! ನೀವೂ ಮನಸ್ಸನ್ನು ಯಾವುದೇ ರೀತಿ ವಿಚಲಿತರಾಗದೇ ಏಕಾಂತದಲ್ಲಿರಲು ಪ್ರಯತ್ನಿಸಿ, ಆಗ ನಿಮಗೇ ಗೊತ್ತಾಗುವುದು ಎಷ್ಟುಬೇಗ ಏಕಾಂತದಿಂದ ಹೊರಬಂದು ನಿಮ್ಮನ್ನು ನೀವು ಮರೆಯಲು ಪ್ರಯತ್ನಿಸುತ್ತೀರಿ ಎಂದು. ನಾವು ಕರೆಯಲ್ಪಡುವ ಈ ನಾಗರೀಕತೆಯ ಒಂದು ಮುಖ್ಯ ಭಾಗವಾಗಿ ಈ ವ್ಯವಸ್ಥಿತ ಆಮೋದ ಮತ್ತು ಯಾಂತ್ರಿಕವಾಗಿ ಮನಸ್ಸನ್ನು ಬೇರೆ ಕಡೆ ಸೆಳೆಯುವಿಕೆಯ ರಚನೆ ರೂಪುಗೊಂಡಿದೆ. ನೀವು ಗಮನಿಸಿದರೆ, ಈ ಪ್ರಪಂಚದಾದ್ಯಂತ ಜನರು ವಿಕ್ಷಿಪ್ತರಾಗಿಯೂ, ಕೃತಕತೆಯಿಂದ ಕೂಡಿದವರಾಗಿಯೂ ಹಾಗೂ ಸಿನಿಕರಾಗಿಯೂ ಇರುವುದನ್ನು ನೋಡುವಿರಿ. ಮನರಂಜನೆಗಳ ಹೆಚ್ಚಳ, ಅಸಂಖ್ಯಾತ ಗ್ರಂಥಗಳು, ನಾನಾ ಕ್ರೀಡೆಗಳ ಮತ್ತು ಸುದ್ದಿಗಳನ್ನೊಳಗೊಂಡ ದಿನಪತ್ರಿಕೆ ಇವೆಲ್ಲಾ ನಾವು ಮನರಂಜನೆಗಳಿಂದ ಆಕರ್ಷಿಸಲ್ಪಡುವುದನ್ನು ಸೂಚಿಸುತ್ತದೆ.

ಯಾಕೆಂದರೆ ನಾವು ಆಂತರಂಗಿಕವಾಗಿ ಪೊಳ್ಳಾದ್ದರಿಂದ, ಮಂದ ಬುದ್ಧಿಯುಳ್ಳವರಾದ್ದರಿಂದ, ಅತೀ ಸಾಧಾರಣರಾದ್ದರಿಂದ ನಾವು ನಮ್ಮ ಸಂಬಂಧಗಳನ್ನು, ಸಾಮಾಜಿಕ ಸುಧಾರಣೆಗಳನ್ನು ನಮ್ಮಿಂದ ನಾವು ಪಾರಾಗಲು ಉಪಯೋಗಿಸುತ್ತೇವೆಯೇ? ನಾವು ಬಹಳಷ್ಟು ಮಂದಿ ಎಷ್ಟು ಒಬ್ಬಂಟಿಯಾಗಿದ್ದೇವೆಂದು ನೀವು ಗಮನಿಸಿರಬಹುದು. ಇದರಿಂದ ಪಾರಾಗಲು ನಾವು ದೇವಸ್ಥಾನಕ್ಕೆ, ಚರ್ಚಿಗೆ, ಮಸೀದಿಗಳಿಗೆ ಹೊಗುತ್ತೇವೆ. ಅಲಂಕೃತರಾಗಿ ಸಾರ್ವಜನಿಕ ಸಮಾರಂಭಗಳಿಗೆ ಹೋಗುತ್ತೇವೆ, ಟಿ.ವಿ. ವೀಕ್ಷಿಸುತ್ತೇವೆ ರೇಡಿಯೋ ಆಲಿಸುತ್ತೇವೆ, ಓದುತ್ತೇವೆ, ಹೀಗೆಯೇ ಏನೇನೋ ಮಾಡುತ್ತೇವೆ.

------------

ನಾನು ನಿಮಗೆ ಹೇಳಲಿರುವುದನ್ನು ಗಮನಿಸಿ. ಈ ಗಣಕಯಂತ್ರ, ಅಂದರೆ ವಿದ್ಯುನ್ಮಾನದ ಮಿದುಳು ಮಾನವನ ಪ್ರತಿದಿನದ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ- ಕಛೇರಿಗೆ ಹೋಗುವುದು, ಕೆಲಸ ಮಾಡುವುದು. ಆದ್ದರಿಂದ ಮಾನವನು ಯತೇಚ್ಚ ವಿರಾಮದ ವೇಳೆಯನ್ನು ಹೊಂದುತ್ತಾನೆ- ಏಕೆಂದರೆ, ಈ ಯಂತ್ರಗಳಿಗೆ ಕೊಡಲ್ಪಟ್ಟ ಜ್ಞಾನರಾಶಿ ಒಂದು ಗುಂಡಿ ಒತ್ತುವುದರ ಮೂಲಕ ಆಲೋಚನೆ ಮತ್ತು ಕೆಲಸವಾಗಿ ಪರಿವರ್ತನೆಯಾಗುತ್ತದೆ. ವಿಜ್ಞಾನಿಗಳು ಈ ಬಗ್ಗೆ ಸಂಶೋಧಿಸುತ್ತಿದ್ದಾರೆ ಹಾಗೂ ಇದು ಈಗಾಗಲೇ ಸಂಭವಿಸುತ್ತಿದೆ. ಹಾಗಾದರೆ ನಿವೇನು ಮಾಡಬೇಕೆಂದಿರುವಿರಿ? ಈ ಯಂತ್ರಗಳು ಮಾನವನ ಗುಲಾಮಗಿರಿ ಶ್ರಮವನ್ನು ವಶಪಡಿಸಿಕೊಳ್ಳುತ್ತದೆ. ಈ ಯಂತ್ರಗಳು ಮಾನುಷ್ಯನ ರೋಗನಿಧಾನ ಮಾಡುತ್ತದೆ. ಅವನಿಗಿರುವ ನೋವನ್ನು ಯಂತ್ರಗಳ ಬಳಿ ತಿಳಿಸಿದರೆ ಅವು ಪರಿಹಾರವನ್ನೂ ಸೂಚಿಸುತ್ತದೆ. ವೈದ್ಯರೂ ಹೆಚ್ಚು ಕಡಿಮೆ ಅನವಶ್ಯಕರಾಗುತ್ತಾರೆ. ಈ ವಿದ್ಯುನ್ಮಾನಯಂತ್ರವು ಸಣ್ಣ ಪುಟ್ಟ ತೊಂದರೆಯನ್ನು ನಿವಾರಿಸುವುದೇ ಅಲ್ಲದೇ ದೊಡ್ಡ ದೊಡ್ಡ ಕಾರ್ಖಾನೆಗಳನ್ನೂ ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆ. ಮಾನವನು ಇದರಿಂದ ಅತಿಯಾದ ವಿರಾಮದ ವೇಳೆಯನ್ನು ಹೊಂದುತ್ತಾನೆ. ಹಾಗಾದರೆ ಈ ವಿರಾಮದ ವೇಳೆಯನ್ನು ಹೇಗೆ ಕಳೆಯುತ್ತಾನೆ? ಈ ವಿದ್ಯುನ್ಮಾನಯಂತ್ರವು ಈಗಾಗಲೇ ಈ ದೇಶದಲ್ಲಿ ಬಂದಿದೆ, ಅಥವಾ ಇನ್ನು ೨೦ ವರ್ಷದ ನಂತರ ಬರಬಹುದು ಆದರ ಬರುವಿಕೆಯನ್ನು ಎದುರಿಸಲು ನೀವು ಈಗಲೇ

ತಯಾರಾಗಬೇಕು. "ನನ್ನ ಮುಂದೆ ಕೆರಿಯರ್ ಇದೆ, ಬೇರೇನೂ ಆಲೋಚಿಸಲಾರೆ, ಕೆಲಸವನ್ನು ಗಳಿಸಲು ಪರೀಕ್ಷೆಯಲ್ಲಿ ತೇರ್ಗಡೆಹೊಂದಬೇಕು" ಎಂದು ಹೇಳಬಾರದು. ಸರಿತಾನೆ? ಭವಿಷ್ಯ ಪೂರ್ತಿಯಾಗಿ ಬದಲಾಗಲಿದೆ. ನೀವು ತುಂಬಾ ವಿರಾಮದ ಹೊಂದಲಿರುವಿರಿ-ಗಂಟೆಗಟ್ಟಲೆ. ಕಛೇರಿಗಾಗಲೀ, ಕಾರ್ಖಾನೆಗಾಗಲೀ ಹೋಗಿ ನಿರ್ವಾಹಕನಾಗಿಯೋ, ಗುಮಾಸ್ತನಾಗಿಯೋ ದುಡಿಯುವ ಅವಶ್ಯಕತೆ ಇರುವುದಿಲ್ಲ. ಆಗ ಏನು ಮಾಡುವಿರಿ?

ಈ ಒಂದು ದೃಷ್ಟಿಕೋನದಿಂದ ನಿಮ್ಮ ಭವಿಷ್ಯ ಜೀವನವನ್ನು ನೋಡಿರಿ. ಮಾನವನಿಗೆ ತಾನು ಇಷ್ಟಪಡುವುದನ್ನು ಮಾಡಲು, ವಿರಾಮದ ಸೋಮಾರಿಯಾಗಿ ಹಾಯಾಗಿರಲು, ತನ್ನೊಂದಿಗೆ ತಾನಿದ್ದು ಸುಖಿಸಲು, ಪರ್ವತಾರೋಹಣಮಾಡಲು, ಈಜಾಡಲು, ತನಗನ್ನಿಸಿದ್ದನ್ನು ಮಾಡಲು ವೇಳೆ ಸಿಗುತ್ತದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನಿಮ್ಮ ವೃತ್ತಿಜೀವನವನ್ನು ನೋಡಿ ನಿಮ್ಮ ವಿರಾಮದ ವೇಳೆಯನ್ನು ಸದುಪಯೋಗ ಮಾಡುವ ನಿಟ್ಟಿನಲ್ಲಿಯೂ ಅವಕಾಶ ಮಾಡುವಂತಿರಬೇಕು; ಆಗ ನಿಮ್ಮ ವೃತ್ತಿ ಜೀವನ ಗೌಣವಾಗುತ್ತದೆ. ನಿಮ್ಮ ಮೊದಲನೇ ಆದ್ಯತೆ ನಿಮ್ಮೊಂದಿಗೆ ನೀವು ಹೇಗೆ ಕಾಲ ಕಳೆಯುತ್ತೀರಿ- ಕೆಲವು ಗಂಟೆಗಳಲ್ಲ, ಇಡೀ ಜೀವನವನ್ನು- ಎಂಬುದಾಗಿರುತ್ತದೆ. ನಿಮ್ಮೊಂದಿಗೆ ನೀವು ಹೇಗಿರುತ್ತೀರಿ? ಮನರಂಜನೆಯಲ್ಲಿ ತೊಡಗುವಿರಾ? ಪ್ರತಿದಿನ ಸಿನಿಮಾಕ್ಕೆ ಹೋಗುವಿರಾ? ಈಜಾಡುವಿರಾ? ಪ್ರತಿನಿತ್ಯ ಫುಟ್ಬಾಲ್ ಅಥವಾ ಕ್ರಿಕೆಟ್ ಆಡುವಿರಾ? ದಿನಕ್ಕೆ ಹತ್ತು ಸಲ ದೇವಾಲಯಕ್ಕೆ ಹೋಗುವಿರಾ? ಗೀತೆಯನ್ನೋ, ಬೈಬಲನ್ನೋ, ಇನ್ನಾವುದನ್ನೋ ಓದುವಿರಾ? ಏನು ಮಾಡುವಿರಿ? ಏನೂ ಮಾಡದೇ ಸುಮ್ಮನಿರುವಿರಾ? ಸೋಮಾರಿಯಾಗಿ ದೇಹ ಕೊಳೆಸುತ್ತಾ ಇರುವಿರಾ? ಆದ್ದರಿಂದ ಇದನ್ನು ಈ ಕ್ಷಣದಿಂದ ನೀವು ಕಂಡುಕೊಳ್ಳಬೇಕು. ಮುಂದೆ ಸಿಗುವ ಹೆಚ್ಚು ಹೆಚ್ಚು ಬಿಡುವಿನ ವೇಳೆಯಲ್ಲಿ ನೀವು ಏನು ಮಾಡಲಿರುವಿರಿ ಎಂದು ಕಂಡುಕೊಳ್ಳಿರಿ. ಆದ್ದರಿಂದ, ವೃತ್ತಿಜೀವನ ಮುಖ್ಯವಲ್ಲ, ಇದು ಗೌಣ. ನಿಮಗೆ ಜೀವನಾಧಾರಕ್ಕೆ ಒಂದು ಕೆಲಸಬೇಕು, ಆದರೆ, ಇದೇ ನಿಮ್ಮ ಇಡೀ ಮನಸ್ಸನ್ನು ಪೂರ್ತಿಯಾಗಿ ಇಡೀ ದಿನ ಆವರಿಸಿಕೊಂಡಿರಬಾರದು; ಹಾಗಾದಲ್ಲಿ, ನಿಮ್ಮ ವಿರಾಮದ ವೇಳೆಯನ್ನು ಹೇಗೆ ಕಳೆಯುವಿರೆಂಬುದನ್ನು ಕಾಣಲಾಗುವುದಿಲ್ಲ. ಆದ್ದರಿಂದ, ನಿಮ್ಮ ಜೀವನಾಧಾರಿತ ವೃತ್ತಿಯಲ್ಲಿ, ತೊಡಗುವ ಮುನ್ನ ನಿಮ್ಮ ಬಿಡುವಿನ ವೇಳೆಯನ್ನು ಹೇಗೆ ಕಳೆಯಬೇಕು ಎಂಬ ವಿಷಯವನ್ನು ಮನಗಾಣಬೇಕು. ಅರ್ಥವಾಯಿತೇ?

**ಮೂಲ: "Boredom and Entertainment Industry**
**-J.Krishnamurti**



# ಬೆಂಗಳೂರು ಅಧ್ಯಯನ ಕೇಂದ್ರದ ಪ್ರಕಟಣೆ

ಪ್ರೀತಿಯ ಸ್ನೇಹಿತರೆ,

ಬೆಂಗಳೂರು ಅಧ್ಯಯನ ಕೇಂದ್ರವು ವ್ಯಾಲಿ ಶಾಲೆಯ ಆವರಣದಲ್ಲೇ ನೆಲೆಗೊಂಡಿದೆ. ದಿನ ನಿತ್ಯದ ಸಂದರ್ಶಕರು ಮತ್ತು ತಂಗುವ ಅತಿಥಿಗಳಿಗಾಗಿ ಅಧ್ಯಯನ ಕೇಂದ್ರವನ್ನು ನಾವು ನವೆಂಬರ್ ೨೦, ೨೦೨೧ ರಂದು ಮತ್ತೆ ತೆರೆಯಲಿದ್ದೇವೆ. ಕೋವಿಡ್ ಸಂಬಂಧಿತ ಕೆಲವು ಶಿಷ್ಟಾಚಾರಗಳನ್ನ ಪಾಲಿಸಲಿದ್ದೇವೆ. ದಯವಿಟ್ಟು ಕೆಳಕಂಡ ದಾಖಲೆಯನ್ನು ಕೂಲಂಕುಷವಾಗಿ ಓದಿರಿ ಮತ್ತು ಬರುವ ಮುನ್ನ ಆ ಶಿಷ್ಟಾಚಾರಗಳ ಬಗ್ಗೆ ಸಾಕಷ್ಟು ಪರಿಚಯ ಮಾಡಿಕೊಳ್ಳಿ

ಅಧ್ಯಯನ ಕೇಂದ್ರದ ಸಾಮೂಹಿಕ ರಿಟ್ರೀಟ್ ಗಳನ್ನ ಮುಂಬರುವ ದಿನಗಳಲ್ಲಿ ಪುನರಾರಂಭಿಸಲಿದೆ.

ಅಧ್ಯಯನ ಕೇಂದ್ರದ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಕೆಳಕಂಡ ಲಿಂಕ್ ಗಳನ್ನ ಸಂದರ್ಶಿಸಿರಿ.

ಅಧ್ಯಯನ ಕೇಂದ್ರ, ಬೆಂಗಳೂರು: https://www.kfistudy.org/study.html

ದಿನನಿತ್ಯದ ಸಂದರ್ಶಕರ ಶಿಷ್ಟಾಚಾರಗಳು:
https://drive.google.com/file/d/1QfV0Jl3LoqYOZ2O2wsoATRkVPk_VfJ1L/view

ತಂಗುವ ಅತಿಥಿಗಳ ಶಿಷ್ಟಾಚಾರಗಳು:
https://drive.google.com/file/d/1QfTi6RsrOYeTVeTZUB6ersdmjjpnrrjD/view

**ಸಂಯೋಜಕರು, ಬೆಂಗಳೂರು ಅಧ್ಯಯನ ಕೇಂದ್ರ**





# ಕನ್ನಡದಲ್ಲಿ ಜೆ.ಕೃಷ್ಣಮೂರ್ತಿ ಪುಸ್ತಕಮಾಲೆ


೧. ಧ್ಯಾನ ಚಿಂತನ
ಅನು. ಡಾ. ನಿ. ಮುರಾರಿ ಬಲ್ಲಾಳ ರೂ. ೫೦/-
೨. ಜೆ.ಕೆ. ಜೀವನ – ದರ್ಶನ
ಲೇ. ಡಾ. ನಿ. ಮುರಾರಿ ಬಲ್ಲಾಳ ರೂ.೧೩೦/-
೩. ತಿಳಿದುದೆಲ್ಲವ ಬಿಟ್ಟು... ***
ಅನು. ಪ್ರೊ. ಜಿ. ವೆಂಕಟಸುಬ್ಬಯ್ಯ ರೂ. ೯೦/-
೪. ಸಂಸ್ಕೃತಿ ಸಂಗತಿ ***
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್ ರೂ.೧೫೦/-
೫. ಶಿಕ್ಷಣ ಮತ್ತು ಜೀವನ
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್ ರೂ. ೬೫/-
೬. ಅನುದಿನ ಚಿಂತನ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೫೦/-
೭. ಹಿಂಸೆಯನ್ನು ಮೀರಿ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೧೨೦/-
೮. ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೦/-
೯. ಭಯದಾಚೆಯ ಬದುಕು ***
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೦/-
೧೦. ದುಃಖಕ್ಕೆ ವಿದಾಯ ***
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೫/-
೧೧. ಸಂಘರ್ಷವಿರದ ಬದುಕಿಗಾಗಿ ***
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೫/-
೧೨. ಸಂಬಂಧವೆಂದರೇನು?
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೫/-
೧೩. ಪ್ರೀತಿ ಎಂದರೇನು? ***
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೫/-
೧೪. ಅಸೂಯೆ ***
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೩೦/-
೧೫. ಬಾಳಿಗೊಂದು ಭಾಷ್ಯ - ಸಂಪುಟ ೧
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೩೦/-
೧೬. ಬಾಳಿಗೊಂದು ಭಾಷ್ಯ - ಸಂಪುಟ ೨
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೫೦/-
೧೭. ಬಾಳಿಗೊಂದು ಭಾಷ್ಯ - ಸಂಪುಟ ೩
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೮೫/-
೧೮. ಮೊದಲ ಹಾಗೂ ಕೊನೆಯ ಬಿಡುಗಡೆ
ಅನು. ರುಕ್ಮಿಣಿ ಕೃಷ್ಣಮೂರ್ತಿ ರೂ.೨೦೦/
೧೯. ಭಯ ನಿಮಗೇನು ಮಾಡೀತು?
ಅನು. ಎಸ್. ದಿವಾಕರ್ ರೂ.೪೦/-
೨೦. ಇನ್ನೊಬ್ಬರ ಬಗ್ಗೆ ಕಾಳಜಿ - ಹಾಗೆಂದರೇನು?
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್ ರೂ.೪೦/-
೨೧. ಸ್ವಾತಂತ್ರ್ಯ ಎಂದರೇನು?
ಅನು. ಗಿರೀಶ್ ವಾಘ್ ರೂ.೪೦/-
೨೨. ಶಿಕ್ಷಣ
ಅನು. ಎಸ್.ಡಿ. ಕಾಶೀಕರ ರೂ.೯೦/-
೨೩. ಬದುಕಿನ ಕಡೆಗೆ
ಅನು. ಎಸ್.ಡಿ. ಕಾಶೀಕರ ಮತ್ತು
ವನಮಾಲಾ ಆರ್. ರಾವ್ ರೂ.೧೪೦/-
೨೪. ಚಲನಶೀಲ ಬದುಕು - ಕಲಿಕೆ
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೫೦/-
೨೫. ನೀವೇ ಲೋಕ, ನಿಮ್ಮೊಳಗೇ ಲೋಕ
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೦೦/-
೨೬. ಮಾನವನಾಗುವುದು
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೮೦/-
೨೭. ಸಾವಿನೊಂದಿಗೆ ಬದುಕುವುದೆಂದರೆ
ಅನು. ಡಾ|| ವನಮಾಲಾ ವಿಶ್ವನಾಥ್ ರೂ.೨೫/-
೨೮. ಆಯ್ಕೆಯ ನಿರರ್ಥಕತೆ
ಅನು. ಧರ್ಮಶ್ರೀ ಅಯ್ಯಂಗಾರ್ ರೂ. ೨೫/-
೨೯. ಧಾರ್ಮಿಕ ಜೀವನ ಮತ್ತು ಬದುಕಿನ ಕಲೆ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-
೩೦. ಸ್ವಾತಂತ್ರ್ಯ, ಜವಾಬ್ದಾರಿ ಮತ್ತು ಶಿಸ್ತು
ಅನು. ಡಾ. ಸುವರ್ಣ ಬಿ.ಜೆ. ರೂ. ೨೫/-
೩೧. ಕಾಲ ಮತ್ತು ಕಾಲರಹಿತ
ಅನು. ವನಮಾಲಾ ರಂಗನಾಥ ರಾವ್ ರೂ. ೨೫/-
೩೨. ಧ್ಯಾನಮಗ್ನ ಮನಸ್ಸು
ಅನು. ಆಶಾ ಕೋಣಿ ರೂ. ೨೫/-
೩೩. ಕ್ರಿಯೆ ಮತ್ತು ಸಂಬಂಧ
ಅನು. ಶ್ರೀ ಬಿ.ಎ. ಸನದಿ ರೂ. ೨೫/-
೩೪. ದೇವರು
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೨೫/-
೩೫. ಒಲವು ಒಂಟಿತನ
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೩೫/-
೩೬. ಸಂಕಷ್ಟಮಯ ಜಗತ್ತಿನ ಜೊತೆ ಮುಖಾಮುಖಿ
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೫೦/-
೩೭. ಒಳಜಗತ್ತು
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೮೦/-
೩೮. ಸಾಮಾಜಿಕ ಜವಾಬ್ದಾರಿ
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೧೦/-
೩೯. ಶಿಕ್ಷಕನಿಗೆ ಶಿಕ್ಷಣ
ಅನು. ಡಾ. ಬಿ.ಬಿ. ರಾಜಪುರೋಹಿತ್ ರೂ. ೫೦/-


***** ಈ ಪುಸ್ತಕಗಳ ಪ್ರತಿಗಳು ಸಧ್ಯಕ್ಕೆ ಲಭ್ಯವಿಲ್ಲ.**


# ಜೆ.ಕೃಷ್ಣಮೂರ್ತಿ ಪುಸ್ತಕಗಳು : ರಿಯಾಯಿತಿಯಲ್ಲಿ ಲಭ್ಯ






---


ಆತ್ಮೀಯ ಸಹಪಯಣಿಗರೇ,


ಈ ಮೇಲಿನ ಆರು ಕಿರುಪುಸ್ತಕಗಳ ಹಾಗೂ ಈ ಕೆಳಗಿನ ನಾಲ್ಕು ಪುಸ್ತಕಗಳ 100ಕ್ಕೂ ಹೆಚ್ಚು ಪ್ರತಿಗಳು 50% ವರೆಗೆ ರಿಯಾಯಿತಿ ದರದಲ್ಲಿ ಲಭ್ಯವಿವೆ. ನಿಮ್ಮ ಬಳಗದ ಗ್ರಂಥಾಲಯ, ಪುಸ್ತಕಾಲಯ, ವಿದ್ಯಾರ್ಥಿಗಳು, ಶಿಕ್ಷಕರು, ಬಂಧುಗಳು, ಇತ್ಯಾದಿ ಆಸಕ್ತರಿಗೆ ತಿಳಿಸಿ.


ಪ್ರತಿಗಳಿಗಾಗಿ ಸಂಪರ್ಕಿಸಿ – 7760807069, 9972995800.

---




**Published by:**
Editor: Smt. Sushama Inamdar
The Study Bangalore Education Centre
Krishnamurti Foundation India
Thataguni Post, Bangalore - 560082

**Contact Information:**
Mob: 9482641389 / 8317419451
Email: kfistudy@gmail.com
Website: www.kfistudy.org

**ಕನ್ನಡ ಭಾಷಾಂತರ ಸಮಿತಿ ಸದಸ್ಯರು:**
ಡಾ|| ಎಚ್. ಎಸ್. ರಾಘವೇಂದ್ರರಾವ್
ಪ್ರೊ|| ಓ. ಎಲ್. ನಾಗಭೂಷಣ ಸ್ವಾಮಿ
ಡಾ|| ವನಮಾಲಾ ವಿಶ್ವನಾಥ್